ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ೨೬ನೇ ಫೆಬ್ರವರಿ ೧೯೯೬, ಸಾಯನಸೌರ ಫಾಲ್ಗುಣ, ೧೯ನೇ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಿಗ್ಗೆ : ೧೧-೦೦ ಗಂಟೆಗೆ ಸಮಾವೇಶಗೊಂಡಿತು

ಸಭಾಪತಿಯವರು : (ಶ್ರೀ ರಮೇಶ್‌ಕುಮಾರ್)ಅವರು ಪೀಠವನ್ನು ಅಲಂಕರಿಸಿದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ನೆರೆ ರಾಜ್ಯಗಳಿಂದ ಪಡೆಯುತ್ತಿರುವ ವಿದ್ಯುತ್

316 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ವಿದ್ಯುತ್ ಮಂಡಳಿಯವರು ಯಾವ ಯಾವ ರಾಜ್ಯಗಳಿಂದ ಎಂದಿನಿಂದ ಎಷ್ಟು ವಿದ್ಯುತ್ ಪಡೆಯುತ್ತಿದ್ದಾರೆ.

ಆ) ಇದಕ್ಕೆ ಪ್ರತಿ ಯೂನಿಟ್‌ಗೆ ಕೊಡುತ್ತಿರುವ ಹಣ ಎಷ್ಟು?

ಶ್ರೀ ಜೆ. ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) :

ಅ)

ಮಹಾರಾಷ್ಟ್ರ	-	26-9-95	140.0
	ರಿಂದ	31-1-96	ಎಂ.ಯು.
	ರವರೆಗೆ		
ಆಂಧ್ರಪ್ರದೇಶ	-	1-4-95	20.0 ಎಂ.ಯು
	ರಿಂದ	31-10-96	
	ರವರೆಗೆ		
ತಮಿಳುನಾಡು	-	11-11-95	2.9 ಎಂ.ಯು
	ರಿಂದ	17-11-95	
	ರವರೆಗೆ		
		8-12-95	5.2 ಎಂ.ಯು
	ರಿಂದ	19-12-95ರ	ವರೆಗೆ
		ಒಟ್ಟು	166.1 ಎಂ.ಯು

ಅ) ವಿವರಗಳು ಕೆಳಕಂಡಂತಿದೆ :

	ಪ್ರತಿ ಯೂನಿಟ್‌ನ ದರ ರೂ. ಪೈ.
ಮಹಾರಾಷ್ಟ್ರ	2.00
ಆಂಧ್ರಪ್ರದೇಶ	1.50
ತಮಿಳುನಾಡು	1.80

ಶ್ರೀ ಯು.ಬಿ. ಬಣಕಾರ್ : ಅಧ್ಯಕ್ಷರೇ ಪರರಾಜ್ಯಗಳಿಂದ ವಿದ್ಯುತ್ ಪಡೆಯವ ದೃಷ್ಟಿ ಎಂದರೆ, ಈ ರಾಜ್ಯದಲ್ಲಿ ಲಭ್ಯವಿರುವ ವಿದ್ಯುತ್ ರಾಜ್ಯಕ್ಕೇ ಸಾಕಾಗುವುದಿಲ್ಲವೆಂಬ ಭಾವನೆ ಬರುತ್ತಿದೆ. ಮಾನ್ಯ ಉಪಮುಖ್ಯಮಂತ್ರಿಗಳು 8-10 ದಿವಸದ ಹಿಂದೆ ಸಂಜೆ 6ರಿಂದ 10ರ ವರೆಗೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿದ್ಯುತ್ ಪೂರೈಸುವುದಾಗಿ ಹೇಳಿದ್ದಾರೆ. ಇದರರ್ಥ ಅವರು ಇನ್ನೂ ಹೆಚ್ಚು ವಿದ್ಯುತ್ ಪಡೆಯಬೇಕಾಗಿತ್ತು ಆದರೆ ಅವರು ಹೇಳಿದಂತೆ ಗ್ರಾಮೀಣ ಪ್ರದೇಶದಲ್ಲಿ 6-10ರ ವರೆಗೆ ವಿದ್ಯುತ್ ಪೂರೈಕೆಯಾಗುತ್ತಿಲ್ಲ ಆದ್ದರಿಂದ 6ರಿಂದ 10ರ ವರೆಗೆ ವಿದ್ಯುತ್ತನ್ನು ಯಾವ ರೀತಿ ಅವರು ಪೂರೈಸುತ್ತಾರೆಂದು ತಿಳಿಯ ಬಯಸುತ್ತೇನೆ.

ಶ್ರೀ ಜೆ.ಎಚ್. ಪಟೇಲ್ : ಅಧ್ಯಕ್ಷರೇ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಕರ್ನಾಟಕ ವಿಧಾನಮಂಡಲಿಯು ಯಾವ್ಯಾವ ರಾಜ್ಯಗಳಿಂದ ಎಷ್ಟು ವಿದ್ಯುತ್ ಪಡೆಯುತ್ತಿದ್ದಾರೆ ಎಂದಿದೆ, ಅದಕ್ಕೆ ಉತ್ತರ ಕೊಟ್ಟಿದ್ದೇವೆ. ಮಹಾರಾಷ್ಟ್ರದಿಂದ 140 ಎಂ.ಯು. ಆಂಧ್ರದಿಂದ 20 ಎಂ.ಯು ತಮಿಳುನಾಡಿನಿಂದ ಒಟ್ಟು 8 ಎಂ.ಯು ಇಷ್ಟು ಪಡೆಯುತ್ತಿದ್ದೇವೆ. ಇದಕ್ಕೆ ಬೆಲೆ ಕೇಳಿದ್ದೀರಿ, ಮಹಾರಾಷ್ಟ್ರದಿಂದ ಪಡೆಯುವ ವಿದ್ಯುತ್‌ಗೆ ಒಂದು ಯೂನಿಟ್‌ಗೆ 2 ರೂ, ಆಂಧ್ರ ಪ್ರದೇಶದಿಂದ ಅಲ್ಲಿ ವಿದ್ಯುತ್ ಉತ್ಪತ್ತಿ ಕಡಿಮೆ, ಅಲ್ಲಿಗೆ 1.50 ಪೈಸೆ ಕೊಡುತ್ತೇವೆ, ತಮಿಳುನಾಡಿನದಕ್ಕೆ 1.80 ಪೈಸೆ ತಾವು 6 ಗಂಟೆಯಿಂದ 10 ಗಂಟೆವರೆಗೆ ಮಕ್ಕಳಿಗೆ ಓದಲಿಕ್ಕೆ ತೊಂದರೆಯಾಗಬಾರದು ಎಂಬುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ಎಂದು ಕೇಳಿದ್ದಾರೆ ಆ ಪ್ರಶ್ನೆ ಸಂಬಂಧಪಡುವುದಿಲ್ಲ.

ಶ್ರೀ ಯು.ಬಿ. ಬಣಕಾರ್ : ಅಧ್ಯಕ್ಷರೇ, 6 ರಿಂದ 10 ಗಂಟೆವರೆಗೆ ವಿದ್ಯುತ್ ಕೊಡಬೇಕಾದರೆ ನಮ್ಮ ರಾಜ್ಯದಲ್ಲಿ ವಿದ್ಯುತ್‌ಸೌಕರ್ಯ ಇಲ್ಲವೆಂದು ಕೇಳಿಬರುತ್ತಿದೆ. ಅದನ್ನು ಪೂರೈಸಬೇಕಾದರೆ ಇನ್ನೂ ಹೆಚ್ಚಿನ ವಿದ್ಯುತ್ತನ್ನು ಪರರಾಜ್ಯಗಳಿಂದ ಪಡೆದುಕೊಳ್ಳಬೇಕಾಗುತ್ತದೆ. ಈಗ ಕೊಟ್ಟಿರುವ ಮಾಹಿತಿಯಲ್ಲಿ ಫೆಬ್ರವರಿ ತಿಂಗಳಲ್ಲಿ ಇನ್ನೂ ಹೆಚ್ಚಿನ ವಿದ್ಯುತ್ ಪಡೆಯುವಂತಹದ್ದು ಇರಬೇಕಾಗಿತ್ತು. ಈಗಿರುವ ವಿದ್ಯುತ್‌ನಿಂದ 6ರಿಂದ 10ರ ವರೆಗೆ ವಿದ್ಯುತ್ ಪೂರೈಸಲು ಹೇಗೆ ಸಾಧ್ಯವೆಂದು ನನ್ನ ಪ್ರಶ್ನೆ.

ಅಧ್ಯಕ್ಷರು : ಪರರಾಜ್ಯಗಳಿಂದ ಪಡೆಯುವ ವಿದ್ಯುತ್ ಹಕ್ಕಿನಿಂದ ಬರುವುದಲ್ಲ, ಬೇಡಿ ತೆಗೆದುಕೊಳ್ಳುವುದು. ಅದಕ್ಕೆ ನಾವು ಡಿಮಾಂಡ್ ಮಾಡುವುದಕ್ಕಾಗುವುದಿಲ್ಲ. ನಾವು ಡೈನೇಸಿಗಳು ಹೋಗಿ ಕೇಳಿಕೊಂಡರೆ ಅವರು ಏನು ಕೊಡುತ್ತಾರೋ ತೆಗೆದುಕೊಳ್ಳಬೇಕು.

ಶ್ರೀ ಯು.ಬಿ. ಬಣಕಾರ್ : ನನ್ನದಿಷ್ಟೆ ಪ್ರಶ್ನೆ ಅಧ್ಯಕ್ಷರೇ, 8-10 ದಿವಸಗಳ ಹಿಂದೆ ತಾವು 6 ರಿಂದ 10ರ ವರೆಗೆ ವಿದ್ಯುತ್ ಪೂರೈಸುತ್ತೀವಿ ಅಂತ ಹೇಳಿದ್ದಿರಿ. ತಮ್ಮ ಹೇಳಿಕೆಯಂತೆ ಗ್ರಾಮೀಣಪ್ರದೇಶದಲ್ಲಿ ಇನ್ನೂ ಸ್ಟಾರ್ಟಾಗಿಲ್ಲ, ಯಾವಾಗಿನಿಂದ ಮಾಡುತ್ತೀರಿ ಅದನ್ನಾದರೂ ದಯವಿಟ್ಟು ಹೇಳಿ.

ಶ್ರೀ ಜೆ.ಎಚ್. ಪಟೇಲ್ : ಘೋಷಣೆ ಮಾಡಿರುವ ಪ್ರಕಾರ ಕುಡಿವ ನೀರಿನ ಪೂರೈಕೆಗೆ ತೊಂದರೆಗೆ ಬರದಂತೆ ಪ್ರಿಯಾರಿಟಿ ಕೊಡುವುದು, ಎರಡನೆಯದು ಮಕ್ಕಳ ವಿದ್ಯಾಭ್ಯಾಸಕ್ಕೆ ಪರೀಕ್ಷೆ ಸಮಯ ಬಂತು, ಅವರಿಗೆ ತೊಂದರೆಯಾಗದಂತೆ 6ರಿಂದ 10 ಗಂಟೆವರೆಗೂ ಕೊಡಬೇಕೆಂದು. ಆದರೆ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಕೆಲವು ಉತ್ತರವನ್ನು ಇದಕ್ಕೆ ಸಂಬಂಧಪಡದಿದ್ದರೂ ಹೇಳಬೇಕಾಗಿದೆ. 6ರಿಂದ 10ರವರೆಗೆ ಯಾವುದೇ ಕೊರತೆ ಇರದಂತೆ ವಿದ್ಯುತ್ ಕೊಡಿ ಅಂತ ಹೇಳಿದ್ದೇವೆ. ಕೆಇಬಿಯವರು ಕೊಡುತ್ತಾ ಇದ್ದಾರೆ. ಏನಾಗುತ್ತದೆ ಅಂದರೆ 6ರಿಂದ 10ರ ವರೆಗೆ ಸಿಂಗಲ್‌ಫೇಸ್ ಅಂತ ಕೊಡುತ್ತಾರೆ, ಬರೀ ಲೈಟ್ ಮಾತ್ರ ಹಾಕುವುದು. ಆಗ ಮೋಟಾರ್ ಬೇರೆ ಯಂತ್ರಗಳನ್ನು ಚಾಲೂ ಮಾಡಬಾರದು. ನಾವು ಮಕ್ಕಳಿಗೆ ಅಂತಕ ಕೊಟ್ಟಾಗ ಇರಿಗೇಶನ್ ಪಂಪ್‌ಸೆಟ್‌ನವರು ಸಣ್ಣ ಉದ್ಯಮದವರು ಬಳಸಲು ತೊಡಗುವುದರಿಂದ ಒಂದನೆಯದಾಗಿ ಅವರಿಗೇ ಲುಕ್ಸಾನ ಆಗುತ್ತದೆ, ಅವರ ಮೋಟಾರುಗಳು ಬರ್ಮ್ ಆಗುತ್ತವೆ. ಎರಡನೆಯದು, ಕೆಇಬಿಯ ಟ್ರಾನ್ಸ್‌ಫಾರ್ಮರ್‌ಗಳು ಆ ಲೋಡ್ ತೆಡೆದುಕೊಳ್ಳಲಾರದೆ ಅವು ಸುಡುತ್ತವೆ. ಹೀಗಾಗಿ ತಾವು ಕೇಳಿದ್ದು ಒಳ್ಳೆಯದಾಯಿತು. ನಾನು ಜನತೆಗೆ ಮನವಿ ಮಾಡಿಕೊಳ್ಳುವುದಿಷ್ಟೆ : ಇನ್ನು ಎರಡು ತಿಂಗಳ ಮಟ್ಟಿಗೆ ಸಹಕಾರ ಕೊಡಿ. ನಾವು ಸಿಂಗಲ್ ಫೇಸ್ ಲೈಟ್‌ಕೊಟ್ಟಾಗ ಬೇರೆ ಉಪಕರಣಗನ್ನು ಆನ್ ಮಾಡಬಾರದು. ಮಾಡಿದರೆ ಅವರಿಗೂ ತೊಂದರೆಯಾಗುತ್ತದೆ ಕೆಇಬಿಗೂ ತೊಂದರೆಯಾಗುತ್ತದೆ. ಮಾನ್ಯ ಬಣಕಾರ್‌ರವರ ಕಳಕಳಿ ಏನಿದೆ ಇನ್ನೂ ಶುರುಮಾಡಿಲ್ಲ ಅಂತ, ನಾವು ಶುರುಮಾಡಿದ್ದೇವೆ, ಸಾಮಾನ್ಯವಾಗಿ ವೋಲ್ಟೆಜ್ ಇಂಪ್ರೂವ್ ಆಗಿದೆ, 6ರಿಂದ 10ರ ವರೆಗೆ ನಾವು ಟೈಂ ರೆಗ್ಯೂಲೇಟ್ ಏನುಮಾಡಿದ್ದೇವೆ ಅದು ಪೂರ್ಣ ಸರಿಯಾಗಿದೆ ಅಂತ ನಾನು ಹೇಳುವುದಿಲ್ಲ ನಿಮ್ಮ ಭಾಗದಲ್ಲೇ ಏನಾದರೂ ಕೊರತೆ ಇದ್ದರೆ ತಿಳಿಸಿದರೆ ನಾನು ಅಧಿಕಾರಿಗಳಿಗೆ ತಿಳಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ ಇಲ್ಲಿ ತಮಿಳುನಾಡಿನಿಂದ 11-11-95ರಿಂದ 17-11-95ರ ವರೆಗೆ 2.9 ಎಂಯು ವಿದ್ಯುತ್ ಸರಬರಾಜಾಗುತ್ತಿತ್ತು. ಮತ್ತೆ 8-12-95ರಿಂದ 19-12-1995ರ ವರೆಗೆ 5.2 ಎಂಯು ಸರಬರಾಜಾಗುತ್ತಿತ್ತು. ಈಗ ನಮಗೇನಾದರೂ ತಮಿಳುನಾಡಿನಿಂದ ಬರುತ್ತಿದೆಯೇ? ಎರಡನೆಯದು ಮಹಾರಾಷ್ಟ್ರ ಆಂಧ್ರ ತಮಿಳುನಾಡಿನಿಂದ ಈಗ ಎಷ್ಟು ವಿದ್ಯುತ್ ಪಡೆಯುತ್ತಿದ್ದೇವೆ ಅದರಿಂದ ನಮ್ಮ ಆಗತ್ಯಗಳನ್ನು ಪೂರೈಸಲಿಕ್ಕೆ ಸಹಕಾರಿಯಾಗುತ್ತಿದೆಯೇ?

ಶ್ರೀ ಜೆ.ಎಚ್. ಪಟೇಲ್ : ದಕ್ಷಿಣದ ಯಾವ ರಾಜ್ಯದಲ್ಲೂ ಇವತ್ತು ಸ್ಥಿತಿ ಸರಿಯಿಲ್ಲ. ಆಂಧ್ರ ಪ್ರದೇಶದಲ್ಲೂ ತಮಿಳುನಾಡಿನಲ್ಲೂ ನಮಗಿಂತ ಹೆಚ್ಚು ಪವರ್‌ಕಟ್ ಇಂಪೋಸ್ ಮಾಡಿದ್ದಾರೆ. ಲೋಡ್‌ಶೆಡಿಂಗ್ ಟೈಂ ಜಾಸ್ತಿ ಇದೆ. ಆದ್ದರಿಂದ ತಮಿಳುನಾಡಿನಿಂದ ಆಂಧ್ರಗಳಿಂದ ಯಾವುದೇ ರೀತಿಯ ವಿದ್ಯುತ್ ಸಲಕರಣೆಗಳಾಗಲಿ ಸಹಾಯವನ್ನಾಗಲಿ ನಿರೀಕ್ಷೆ ಮಾಡುವಂತಿಲ್ಲ.

ಶ್ರೀ ಬಿ.ಬಿ. ಶಿವಪ್ಪ : ಅಧ್ಯಕ್ಷರೇ ಉಪಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಎರಡು ವಿಚಾರ ಪ್ರಸ್ತಾಪ ಮಾಡಿದರು. ವೋಲ್ಟೇಜ್ ಇಂಪ್ರೂವ್ ಆಗಿದೆ ಮತ್ತೆ ಸಿಂಗಲ್ ಫೇಸನ್ನು ನಾವು ದಿನಬಿಟ್ಟು ಏನು ಕೊಡುತ್ತಿದ್ದೇವೆ ಅದು ಸಮರ್ಪಕವಾಗಿ ವಿತರಣೆಯಾಗುತ್ತಿದೆ ಅಂತ. ಆದರೆ ನಾನು ಇಷ್ಟು ಮಾತ್ರ ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ವೋಲ್ಟೆಜ್ ತುಂಬ ಹಾಳಾಗಿದೆ. ಹಿಂದಿಗಿಂತ ಹಾಳಾಗಿದೆ. ಇದನ್ನು ತಾವು ಗಮನಿಸಬೇಕು. ಏಕೆಂದರೆ ಕೆಇಬಿಯಲ್ಲಿ ವಿದ್ಯುತ್ ಕೊರತೆ ಇದೆ. ಅದಕ್ಕೆ ಸಹಕಾರ ನಾವೆಲ್ಲ ಕೊಡಲೇಬೇಕು. ಕೇವಲ ಕೊರತೆ ಮಾತ್ರವಲ್ಲ ಸಮರ್ಪಕವಾಗಿ ಚಾಕರಿ ಕೂಡ ಅಲ್ಲಿ ಆಗುವುದಿಲ್ಲ. ನಗರ ಪ್ರದೇಶಗಳಲ್ಲಿ ಪ್ರಾಬ್ಲಂ ಇದೆ. ಗ್ರಾಮೀಣ

ಪ್ರದೇಶದಲ್ಲಿ ಕೇಳುವವರೇ ಇಲ್ಲ. ನೀವು ಕೊಡತಕ್ಕಂತಹ 6ರಿಂದ 7, 8ರಿಂದ 10 ಯಾವುದು 2, 4, ಗಂಟೆ ಕೊಡುತ್ತೀರಿ, ಕೊನೇ ಪಕ್ಷ 10 ರಿಂದ 15 ಸಾರಿ ಅದು ಮಧ್ಯೆ. ಹೋಗುತ್ತದೆ. ಒಟ್ಟಾರೆ ನೀವು ಕೊಡುವ ಎರಡು ಗಂಟೆಯಲ್ಲಿ ಅರ್ಧ ಗಂಟೆ ಕೂಡ ಪವರ್ ಸಂಪೂರ್ಣ ಸಿಗುವುದಿಲ್ಲ. ಆದ್ದರಿಂದ ನಾನು ಕೇಳುತ್ತಿರುವುದು, ಗ್ರಾಮೀಣ ಪ್ರದೇಶಗಳಲ್ಲಿ ತಾವು 24 ಗಂಟೆಗಳಲ್ಲಿ 4 ಗಂಟೆ ಕರೆಂಟ್ ಕೊಡಿ. ನಾವು ಅಳವಡಿಸಿಕೊಳ್ಳುತ್ತೇವೆ. ಆದರೆ ಆ 4 ಗಂಟೆಗಳಲ್ಲಿ ಯಾವ ತೊಂದರೆ ಇಲ್ಲದೆ ಬರುವುದಾದರೆ ನಾವುನಿಜಕ್ಕೂ ಸಂತೋಷ ಪಡುತ್ತೇವೆ. ಮಧ್ಯೆ ನಿಂತು ಹೋಗುವ ವ್ಯವಸ್ಥೆ ಏನಿದೆ ಅದು ಆಗಬಾರದು. ಹಳ್ಳಿಯಲ್ಲಿ ಕೆಇಬಿ ಎಂದರೆ ಕರೆಂಟ್ ಇಲ್ಲ ಬಿಡಿ, ಎಂದು ಹೇಳಲು ಶುರುಮಾಡಿಬಿಟ್ಟಿದ್ದಾರೆ. ಅದು ಸತ್ಯ. ಅದರ ಬಗ್ಗೆ ನಾವೇನೂ ಮಾತನಾಡುವುದೇ ಬೇಡ. ಕೊರತೆ ಇದೆ, ಆದರೆ ಇರುವುದನ್ನು ಸಮರ್ಪಕವಾಗಿ ವಿತರಣೆ ಮಾಡುವ ಜವಾಬ್ದಾರಿ ತಾವ್ಯಾರೂ ತೆಗೆದುಕೊಳ್ಳುತ್ತಿಲ್ಲ. ಇವತ್ತು ಎಲ್ಲದಕ್ಕೂ ಕೊರತೆ ಇದೆ. ಸದನಕ್ಕೂ ಕೊರತೆಯೇ ಸರಿಮಾಡಬೇಕಲ್ಲ. ಇರುವ ವಸ್ತುವನ್ನು ಸರಿಯಾದ ರೀತಿ ವಿತರಣೆ ಮಾಡುವಲ್ಲಿ ಈ ಇಲಾಖೆ ವಿಫಲವಾಗಿದೆ ಎಂದು ಹೇಳಲು ಇಷ್ಟಪಡುತ್ತೇನೆ.

ಶ್ರೀ ಜೆ.ಎಚ್. ಪಟೀಲ್ : ಅವರ ಪ್ರದೇಶದಲ್ಲಿ ಈ ಸಮಸ್ಯೆಗಳಿರಬಹುದು ಇಲ್ಲ ಎನ್ನುವುದಿಲ್ಲ ಅಧ್ಯಕ್ಷರೇ, ಮೂರು ದಿವಸ ವಿದ್ಯುತ್ ಇಲ್ಲದಿದ್ದಾಗಲೆಲ್ಲ ಇದೇ ಶಿವಪ್ಪನವರು ಸುಮ್ಮನೇ ಇದ್ದರು. ನೀವು ಕೆಡಿಸಿದ್ದನ್ನು ಇನ್ನು 10 ವರ್ಷ ಹೋದರೂ ಸರಿಮಾಡುವುದಕ್ಕೆ ಸಾಲದು. ಏಕೆ ಮಾತನಾಡುತ್ತೀರಿ, ನೀವ್ಯಾರು ಮಾತನಾಡಬಾರದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವರು ಕೆಡಿಸಿದ್ದನ್ನೇ ನಾವು ಸರಿ ಮಾಡಲು 5 ವರ್ಷ ಬೇಕಾಯಿತು ಮತ್ತೆ ಈಗ ನಮಗೆ ಹೇಳುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇವರಿಬ್ಬರೂ ಕೆಡಿಸಿದ್ದಕ್ಕೋಸ್ಕರ ಕರ್ನಾಟಕದ ರೈತರು ಕೆಟ್ಟುಹೋಗಿಬಿಟ್ಟರು.

ಶ್ರೀ ಜೆ.ಎಚ್. ಪಟೀಲ್ : ಕೆಇಬಿ ಬಗ್ಗೆ ಶಿವಪ್ಪನವರು ಹೇಳಿದರು, ಕೆಇಬಿಗೂ ಒಂದು ಮಿತಿ ಇಲ್ಲವೇ? ಉತ್ಪಾದನೆ ಇಂಪ್ರೂವ್5 ಆಗದ ಹೊರತು ನಾವು ಏನೇ ತೇಪೆ ಹಚ್ಚಿದರೂ ಅದು ತೇಪೆನೆ ಆಗುವುದು. ಜನರೇಶನ್ ಇಂಪ್ರೂವ್ ಅದಾಗ ನಮ್ಮ ಸಮಸ್ಯೆ ಅರ್ಧ ಕಡಿಮೆಯಾಗುತ್ತದೆ. ತಾವು ಸ್ವಲ್ಪ ಸಹಕರಿಸಬೇಕು.. ಆದರೆ ಕೆಲವಲು ಕಡೆ ತಾವು ಹೇಳಿದಂತೆ um scheduled Interruption ಜಾಸ್ತಿಯಾಗುತ್ತಿದೆ ಅದು ಗಮನಕ್ಕೆ ಬಂದಿದೆ, ಅದನ್ನು ಸರಿಪಡಿಸುವುದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನೂ ಕೈಗೊಳ್ಳುತ್ತೇವೆ. ಸ್ಪೆಸಿಫಿಕ್ಕಾಗಿ ಏನಾದರೂ ನಿಮ್ಮ ಸಜೆಶನ್ ಇದ್ದರೆ I will certaionly take it.

ಪಡಿತರ ಚೀಟಿಗಳ ಕುರಿತು.

157 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಆಹಾರ ಮತ್ತು ನಾಗರೀಕಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನೂತನವಾಗಿ ಎಷ್ಟು ಜನರಿಗೆ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. (ಜಿಲ್ಲಾವಾರು ವಿವರ ನೀಡುವುದು)